**ಮೂ.ದಾ.ನಂ.120/2022**

ಪಿ.ಡಬ್ಲ್ಯು.1

(ಇಂದು ದಿನಾಂಕ: **16-10-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀಮತಿ.ವಿ.ಬಿ.ಜೆ. ವಕೀಲರಿಂದಃ**

1 ನೇ ಪ್ರತಿವಾದಿಯು ಈಗ ದಾವಾ ಆಸ್ತಿಯಲ್ಲಿ ವಾಸ್ತವ್ಯದಲ್ಲಿ ಇದ್ದಾರೆ. ನಮ್ಮ ಹಾಗೂ 1 ನೇ ಪ್ರತಿವಾದಿಯ ನಡುವೆ ಮಾತುಕತೆ ಇದೆ. 2 ರಿಂದ 5 ನೇ ಪ್ರತಿವಾದಿಯರು ಅವರವರ ಗಂಡನ ಮನೆಯಲ್ಲಿ ವಾಸ್ತವ್ಯದಲ್ಲಿ ಇದ್ದಾರೆ. ನಮ್ಮ ಹಾಗೂ ಅವರ ನಡುವೆ ಒಳ್ಳೇಯ ರೀತಿಯ ಬಾಂಧವ್ಯ ಇದೆ. 1 ನೇ ವಾದಿಯನ್ನು ಅಂತ್ರವಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತೇವೆ. 1 ನೇ ಪ್ರತಿವಾದಿಯು ಅವರ ಸಂಸಾರ ಸಮೇತವಾಗಿ ಅಂತ್ರವಳ್ಳಿ ಗ್ರಾಮದಲ್ಲಿ ವಾಸ್ತವ್ಯ ಇದ್ದು, ಕಾರ್ಯಕ್ರಮಗಳಿಗೆ ದಾವಾ ಆಸ್ತಿಗೆ ಬಂದು ಹೋಗುತ್ತಾರೆ. 1 ನೇ ಪ್ರತಿವಾದಿಯಿಂದ 5 ನೇ ಪ್ರತಿವಾದಿಯರು ಅವರ ತಂದೆಯ ಭಾಗದ ಆಸ್ತಿಯನ್ನು ಕಾಲಕಾಲಕ್ಕೆ ಬಂದು ನೋಡಿ ಹೋಗುತ್ತಾರೆ ಎಂದರೆ ಸರಿ. ಸದ್ರಿ ಆಸ್ತಿಗಳ ಅವರ ಮಕ್ಕಳ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸರಿ. ಅಂತಹ ಸಮಯದಲ್ಲಿ ಆ ರೀತಿಯ ಕಬ್ಜಾ ವಹಿವಾಟು ಹಾಗೂ ಸಾಗುವಳಿ ಮಾಡುವ ಸಮಯದಲ್ಲಿ ಪ್ರತಿವಾದಿ 1 ರಿಂದ 5 ನೇ ಯವರು ನನಗೆ ಯಾವುದೇ ತೊಂದರೆಯನ್ನು ನೀಡಲಿಲ್ಲ. ಪ್ರತಿವಾದಿ 6 ರಿಂದ 9 ರವರು ಅವರವರ ಜಾಗದಲ್ಲಿ ಕಬ್ಜಾ ವಹಿವಾಟು ಹಾಗೂ ಸಾಗುವಳಿಯನ್ನು ಮಾಡಿಕೊಂಡು ಬಂದಿದ್ದು, ಸದ್ರಿಯವರು ಕೂಡ ನನಗೆ ಯಾವುದೇ ತೊಂದರೆಯನ್ನು ನೀಡಲಿಲ್ಲ. ಪ್ರತಿವಾದಿಯವರು ಅವರವರ ಕಬ್ಜಾ ವಹಿವಾಟಿನ ಜಾಗಕ್ಕೆ ಸಂಭಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಗಳಲ್ಲಿ ಸಾಲವನ್ನು ತೆಗೆದಿರುವುದಿಲ್ಲ.

**ಮೂ.ದಾ.ನಂ.120/2022**

ಪಿ.ಡಬ್ಲ್ಯು.1

ನಿ.ಪಿ.2 ರಲ್ಲಿ ಪ್ರತಿವಾದಿಗಳನ್ನು ಹೊರತುಪಡಿಸಿ ಉಳಿದಂತಹ ವ್ಯಕ್ತಿಗಳೂ ಕೂಡ ದಾವಾ ಆಸ್ತಿಯಲ್ಲಿಯೇ ಇರುತ್ತಾರೆ. ಸದ್ರಿ ವ್ಯಕ್ತಿಗಳು ದಾವಾ ಆಸ್ತಿಗೆ ಸಂಬಂಧಪಟ್ಟ ಮೂಲ ಪುರುಷನ ಕುಟುಂಬಕ್ಕೆ ಸೇರಿದ ಸದಸ್ಯರಾಗಿರುವುದಿಲ್ಲ. ಸದ್ರಿ ವ್ಯಕ್ತಿಗಳನ್ನು ನಾನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಸದ್ರಿ ವ್ಯಕ್ತಿಗಳನ್ನು ಸೇರಿಸದೇ ಈ ದಾವೆಯು ಮುಂದುವರಿಯುವುದಿಲ್ಲ ಎಂದರೆ ಸರಿ.

ನಮ್ಮ ದಾವೆಯಲ್ಲಿ ತೋರಿಸಿದ ವಂಶಾವಳಿ ಸರಿಯಿಲ್ಲ ಎಂದರೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಮೂಲ ಪುರುಷನಾದ ಕುಪ್ಪ ತಿಮ್ಮಣ್ಣ ಗೌಡನ ಮಗಳು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ.

ನನ್ನ ತಾಯಿಯನ್ನು ನನ್ನ ತಂದೆಯು ಕುಡಿದು ಬಂದು ಹೊಡೆ ಬಡೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ಸರಿ. ಸದ್ರಿ ಸಮಯದಲ್ಲಿ ನನ್ನ ತಾಯಿಗೆ ಎಲ್ಲಿಯೂ ಉಳಿದುಕೊಳ್ಳಲು ಸ್ಥಳ ಇರಲಿಲ್ಲ ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ 9 ನೇ ಪ್ರತಿವಾದಿಯ ತಂದೆಯು ದಿಕ್ಕುದಿಸೆ ಇಲ್ಲದ ನನ್ನ ತಾಯಿಯನ್ನು ಕರೆದುಕೊಂಡು ಬಂದು ಅವರ ಮನೆಯಲ್ಲಿ ಇಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ 9 ನೇ ಪ್ರತಿವಾದಿಯ ತಂದೆಯು ಸ್ವಲ್ಪ ದಿನಗಳವರೆಗೆ ನನ್ನ ತಾಯಿಯನ್ನು ಅಲ್ಲ ಉಳಿಸಿಕೊಂಡಿದ್ದರು ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ 9 ನೇ ಪ್ರತಿವಾದಿಯ ತಂದೆಯು ನನ್ನ ತಾಯಿಯನ್ನು ಸಹೋದರಿಯ ತರಹ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ ಆ ಮನೆಯ ಎಲ್ಲ ಸದಸ್ಯರು ಅದೇ ರೀತಿಯಾದ ಗೌರವವನ್ನು ನೀಡುತ್ತಿದ್ದರು ಎಂದರೆ ಸರಿ. 9 ನೇ ಪ್ರತಿವಾದಿಯ ತಂದೆಯ ಅವರ ಕುಟುಂಬದ ಸದಸ್ಯರಲ್ಲದ ನನ್ನ ತಾಯಿಗೆ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ ಅಂದರೆ ನನ್ನ ತಂದೆಯ ಹಕ್ಕಿನ ಜಾಗದಲ್ಲಿ ಒಂದು ಮನೆಯನ್ನು ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ

ಸರಿ. ನಂತರದಲ್ಲಿ ನನ್ನ ತಾಯಿಯು ಅಲ್ಲೇ ವಾಸ್ತವ್ಯವನ್ನು ಮಾಡಿಕೊಂಡು ಬಂದಿರುತ್ತಾರೆ. ನನ್ನ ತಾಯಿಯ ಮರಣಾನಂತರ ನಾನೂ ಕೂಡ ಸದ್ರಿ ಮನೆಯಲ್ಲಿ ವಾಸ್ತವ್ಯದಲ್ಲಿ ಇದ್ದೇನೆ ಎಂದರೆ ಸರಿ. ನನ್ನ ತಾಯಿಗೆ 9 ನೇ ಪ್ರತಿವಾದಿಯ ತಂದೆ ನೀಡಿದ ಗೌರವ ಸ್ಥಾನದ ದುರ್ಲಾಭವನ್ನು ಪಡೆದುಕೊಂಡು ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿ. ಈ ಕಾರಣದಿಂದಾಗಿ ನಾನು ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸಾಕ್ಷಿಯು ಆಯ್ತು ಎಂದು ನುಡಿಯುತ್ತಾರೆ. ಪ್ರತಿವಾದಿಗೆ ತೊಂದರೆಯನ್ನು ನೀಡಬೇಕು ಎಂಬ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ